# ಕನ್ನಡ ಪೋಸ್ಟ್

ಸಂಪಾದಕ : ಮಂಜು ಬನವಾಸೆ

KANNADA POST

ಇದು ಸುದ್ದಿ ವಿಳಾಸ

ಕನ್ನಡ ದಿನಪತ್ರಿಕೆ

ಹಾಸನ | E-mail : kannadapostnews@gmail.com | f / ಕನ್ನಡ post | Price: ₹1

Vol.No.02 | Issue. 188 | Pages. 2 | Date: 05-07-2026, SUNDAY | RNI NO: KARKAN/2024/89601 | Kannada Daily

ಸಂಪುಟ : 02 – ಸಂಚಿಕೆ : 188 – ಪುಟಗಳು : 2 | 05-07-2026 ಭಾನುವಾರ | Ph: 8762954248 | ದರ : ₹1


# ಕಳೆದ ವರ್ಷ ಭರ್ತಿಗೆ ಹತ್ತಿರ: ಈ ವರ್ಷ ಖಾಲಿ ಸಾಗರ

## ಜಿಲ್ಲೆಯ ಜೀವನದಿ ಹೇಮಾವತಿ ಜಲಾಶಯ ಭರ್ತಿಗೆ ಬೇಕಿದೆ 29.01 ಅಡಿ ನೀರು: ಹೆಚ್ಚಿದ ಆತಂಕ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಜಿಲ್ಲೆಯ ಜೀವನದಿ ಹಾಗೂ ಕಾವೇರಿ ಕೊಳ್ಳದ ಪ್ರಮುಖ ಜಲಾಶಯಗಳಲ್ಲಿ ಒಂದಾದ ಗೊರೂರಿನ ಹೇಮಾವತಿ ಜಲಾಶಯ ಕಳೆದ ವರ್ಷ ಇದೇ ಅವಧಿಗೆ ಬಹುತೇಕ ಭರ್ತಿ ಹಂತ ತಲುಪಿತ್ತು.

ಹೌದು; 2025 ರಲ್ಲಿ ಮೇ-ಜೂನ್‌ನಿಂದಲೇ ಜಿಲ್ಲಾದ್ಯಂತ ಹಾಗೂ ಹೇಮಾವತಿ ಜಲಾನಯನ ಪ್ರದೇಶದಲ್ಲಿ ಉತ್ತಮ ಮಳೆಯಾಗಿದ್ದರಿಂದ ಹೇಮೆಯೊಡಲು ಹೆಚ್ಚು ಕಡಿಮೆ ತುಂಬಿಕೊಂಡಿತ್ತು. ಜಲಾಶಯಕ್ಕೆ ಅಕ್ಷರಶಃ ಜೀವಕಳೆ ಬಂದಿತ್ತು. ಆದರೆ ಈ ವರ್ಷ ವರುಣದೇವ ಬಹುತೇಕ ಕಣ್ಮರೆಯಾಗಿರುವುದರಿಂದ ಅದೇ ಹೇಮೆಯ ಒಡಲು ಇನ್ನೂ ಬರಿದಾಗಿಯೇ ಇರುವುದು ಆತಂಕ ಇಮ್ಮಡಿಗೊಳಿಸಿದೆ. ಭರ್ತಿ ಭಾಗ್ಯ ಯಾವಾಗಲೋ ಎಂಬ ದೊಡ್ಡ ಚಿಂತೆ ಮನೆ ಮಾಡಿದೆ.

ಎರಡು-ಮೂರು ದಿನಗಳಿಂದ ಕಪ್ಪು ಮೋಡ ಸಂಚಾರ, ಸೋನೆ ಮಳೆಯ ಸಣ್ಣ



ಅವಾಂತರ ಹೊರತು ಪಡಿಸಿದರೆ, ಅಬ್ಬಬ್ಬಾ ಸಾಕು ಎನ್ನುವಷ್ಟು ಮಳೆರಾಯ ಕೃಪೆ ತೋರಿಲ್ಲ. ಹೀಗಾಗಿ ಎತ್ತ ನೋಡಿದರೂ ಜಲಾಶಯ ಖಾಲಿ ಖಾಲಿ ಕಾಣುತ್ತಿದೆ.

**29.01 ಅಡಿ ಬೇಕು:** ಒಟ್ಟು 2922 ಅಡಿ ಗರಿಷ್ಠ ಮಟ್ಟದ ಜಲಾಶಯದಲ್ಲಿ ಶುಕ್ರವಾರ ಕೇವಲ 2892.90 ಅಡಿ ನೀರಿತ್ತು. ಕಳೆದ ವರ್ಷ ಇದೇ ಅವಧಿಗೆ 2918.37 ಅಡಿ ನೀರಿತ್ತು. ಅಂದರೆ ಜಲಾಶಯ ಭರ್ತಿಗೆ ಕೇವಲ 3.63 ಅಡಿಯಷ್ಟೇ ಬಾಕಿ ಇತ್ತು.

ಆದರೆ ಈ ವರ್ಷ ಹಾಲಿ ನೀರಿನ ಮಟ್ಟ 2892.90 ಅಡಿ ಇರುವುದರಿಂದ ಇನ್ನೂ 29.01 ಅಡಿ ನೀರಿನ ಕೊರತೆ ಇರುವುದು ಕಳವಳಕ್ಕೆ ಕಾರಣವಾಗಿದೆ.

ಒಟ್ಟು 37 ಟಿಎಂಸಿ ನೀರು ಸಂಗ್ರಹ ಸಾಮರ್ಥ್ಯದ ಜಲಾಶಯದಲ್ಲಿ ಹಾಲಿ 15.684 ಟಿಎಂಸಿ ನೀರಿದೆ. ಕಳೆದ ವರ್ಷ ಇದೇ ದಿನ 33.658 ಟಿಎಂಸಿ ನೀರು ಸಂಗ್ರಹ ಆಗಿತ್ತು.

ಸದ್ಯ ಜಲಾಶಯಕ್ಕೆ 3752 ಕ್ಯುಸೆಕ್ ನೀರು ಹರಿದು ಬರುತ್ತಿದ್ದು, ಕಳೆದ ವರ್ಷ 15.712 ಕ್ಯುಸೆಕ್ ನೀರು ಒಳ ಹರಿವಿತ್ತು. ಈಗ ಮುಖ್ಯ ನದಿಗೆ 300 ಕ್ಯುಸೆಕ್ ನೀರು ಹರಿಸಲಾಗುತ್ತಿದ್ದರೆ, ಕಳೆದ ವರ್ಷ 10,800 ಕ್ಯುಸೆಕ್ ನೀರನ್ನು ಹೊರ ಬಿಡಲಾಗುತ್ತಿತ್ತು.

**ಮಳೆಗಾಗಿ ಪ್ರಾರ್ಥನೆ:** ಹೇಮಾವತಿ ಒಡಲು ಭರ್ತಿಯಾಗಲು ಕಾಣೆಯಾಗಿರುವ ವರುಣ ಪ್ರತ್ಯಕ್ಷನಾಗಿ, ವರ್ಷಧಾರೆಯೇ ಆರ್ಭಟಿಸಬೇಕು. ಆದರೆ ಹವಾಮಾನ ಇಲಾಖೆ ನೀಡಿರುವ ಮುನ್ಸೂಚನೆ, ಮಳೆ ಸುಧಾರಿಸುವ ಯಾವುದೇ ಆಶಾವಾದ ಇಲ್ಲವಾಗಿದೆ.

**ಬೆಳೆಯುವ ಅನ್ನಕ್ಕೆ ಕಲ್ಲು:** ಕಳೆದ ಬಾರಿ ಈ ವೇಳೆಗಾಗಲೇ ಹೇಮಾವತಿ ಅಚ್ಚುಕಟ್ಟು ಭಾಗದ ರೈತರು ಭತ್ತ ಮೊದಲಾದ ನೀರಾವರಿ ಬೆಳೆ ಬೆಳೆಯಲು ಅಣಿಯಾಗುತ್ತಿದ್ದರು. ಈ ಬಾರಿ ಆ ರೀತಿಯ ಯಾವುದೇ ಯೋಚನೆ ಮಾಡದ ಪರಿಸ್ಥಿತಿ ನಿರ್ಮಾಣವಾಗಿದೆ.

ಹಾಸನ, ತುಮಕೂರು, ಮಂಡ್ಯ ಮತ್ತು ಮೈಸೂರು ಜಿಲ್ಲೆಗಳ ವ್ಯಾಪ್ತಿಯಲ್ಲಿ ಸುಮಾರು ಆರೂವರೆ ಲಕ್ಷ ಹೆಕ್ಟೇರ್ ವಿಸ್ತೀರ್ಣ ಹೇಮಾವತಿ ಅಚ್ಚುಕಟ್ಟು ಪ್ರದೇಶ ಇದೆ. ಇದರಲ್ಲಿ ಸಿಂಹಪಾಲು ತುಮಕೂರು ಜಿಲ್ಲೆಯಲ್ಲಿದೆ.ಇದೀಗ ಇಷ್ಟೂ ರೈತರು, ಮಳೆಗಾಗಿ ಕಾಯುವುದು ಅನಿವಾರ್ಯವಾಗಿದೆ.

### ಕುಡಿಯುವ ನೀರಿಗೆ ಸದ್ಯಕ್ಕಿಲ್ಲ ಭೀತಿ

**ಸದ್ಯ ಹೇಮಾವತಿ ಜಲಾಶಯದಲ್ಲಿರುವ ನೀರು, ಬೇಸಾಯಕ್ಕೆ ಹೊರತು ಪಡಿಸಿದರೆ ಕೇವಲ ಕುಡಿಯುವ ನೀರಿಗೆ ಎರಡು-ಮೂರು ತಿಂಗಳು ಸಾಕಾಗಲಿದೆ.**

**ಆದರೆ ಇರುವ ನೀರನ್ನು ಕೆಆರ್‌ಎಸ್ ಜಲಾಶಯಕ್ಕೆ ಬಸಿದುಕೊಂಡರೆ ಆಗ ನೀರಡಿಕೆ ನೀಗಿಸಿಕೊಳ್ಳಲು ಹೇಮೆ ನಂಬಿರುವ ಜನರಲ್ಲಿ ದೊಡ್ಡ ಆತಂಕ ಶುರುವಾಗಲಿದೆ. ಸದ್ಯದ ಚಿತ್ರಣ ನೋಡಿದರೆ ಹೇಮಾವತಿ ನೀರಿನ ಮೇಲೆ ಸರ್ಕಾರ ಯಾವಾಗ ಬೇಕಾದರೂ ಕಣ್ಣಿಟ್ಟು ಕರಗಿಸಿಬಿಡಬಹುದು ಎಂಬ ಸನ್ನಿವೇಶ ನಿರ್ಮಾಣವಾಗಿದೆ.**

# ಆರೋಗ್ಯ ತಪಾಸಣೆ




**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನದ ತವರು ಪಬ್ಲಿಕ್ ಚಾರಿಟಬಲ್ ಟ್ರಸ್ಟ್ ವತಿಯಿಂದ ತವರಿನ ಜ್ಞಾನಾದೀಪ ಕಾರ್ಯಕ್ರಮದಡಿ ಚಿಕ್ಕ ಬೂವನಹಳ್ಳಿ, ದಡದಹಳ್ಳಿ ಮತ್ತು ಗಂಜಿಗೆರೆ ಗ್ರಾಮದ ಸರ್ಕಾರಿ ಹಿರಿಯ ಹಾಗೂ ಹಿರಿಯ ಪ್ರಾಥಮಿಕ ಶಾಲೆಯ ಬಡ ಮಕ್ಕಳಿಗೆ ಉಚಿತವಾಗಿ ನೋಟ್ ಪುಸ್ತಕ, ಲೇಖನಿ ಸಾಮಗ್ರಿಗಳು, ಸ್ಕೂಲ್ ಬ್ಯಾಗ್ ಹಾಗೂ ಟ್ರ್ಯಾಕ್ ಸೂಟ್, ಯೂನಿಫಾರ್ಮ್ ಗಳನ್ನು ವಿತರಣೆ ಮಾಡುವುದರೊಂದಿಗೆ ಮಕ್ಕಳ ಹಾಗೂ ಗ್ರಾಮಸ್ಥರ ಆರೋಗ್ಯ ತಪಾಸಣೆ ಮಾಡಿ ಔಷಧಿ ವಿತರಿಸಲಾಯಿತು.

ಸಂಸ್ಥೆಯ ಮುಖ್ಯಸ್ಥರು ಹಾಗೂ ಮಕ್ಕಳ ತಜ್ಞರಾದ ಡಾ.ಪಾಲಾಕ್ಷ ಎಚ್. ಕೆ., ಸಂಸ್ಥೆಯ ಸಿಬ್ಬಂದಿ ಪುನೀತ್ ಕುಮಾರ್ ಕೆ.ಎಂ, ಕಿರಣ್, ವಿದ್ಯಾ ಮತ್ತು ಪುಷ್ಪ ಹಾಗೂ ಶಾಲೆಯ ಶಿಕ್ಷಕರು ಮತ್ತು ಎಸ್‌ಡಿಎಂಸಿ ಅಧ್ಯಕ್ಷರು ಮತ್ತು ಸದಸ್ಯರು ಹಾಗೂ ಗ್ರಾಮಸ್ಥರು ಭಾಗವಹಿಸಿದ್ದರು.

# ಎಸ್‌ಐಆರ್ ರದ್ದತಿಗೆ ಆಗ್ರಹ

ಬೆಂಗಳೂರು: ಚುನಾವಣಾ ಆಯೋಗದ ಕಟ್ಟುನಿಟ್ಟಿನ ನಿರ್ದೇಶನದ ಹೊರತಾಗಿಯೂ ರಾಜ್ಯದ ನಾನಾ ಕಡೆ ಮತ್ತೆ ಮತದಾರರ ವಿಶೇಷ ತೀವ್ರ ಪರಿಷ್ಕರಣೆ(ಎಸ್‌ಐಆರ್)ಯಲ್ಲಿ ಪುನಃ ಅಕ್ರಮಗಳ ಸರಮಾಲೆ ಮುಂದುವರೆದಿದೆ.


ನಿಗದಿಪಡಿಸಿದ ಸ್ಥಳದಲ್ಲೇ ಎಸ್‌ಐಆರ್ ನಡೆಸಬೇಕೆಂದು ಚುನಾವಣಾ ಆಯೋಗ ಶುಕ್ರವಾರ ಎಲ್ಲಾ ಜಿಲ್ಲಾಧಿಕಾರಿಗಳು ಮತ್ತು ಕೆಳಹಂತದ ಅಧಿಕಾರಿಗಳಿಗೆ ಕಟ್ಟುನಿಟ್ಟಿನ ನಿರ್ದೇಶನ ನೀಡಿತ್ತು.

ಆದರೆ ಆಯೋಗದ ನಿರ್ದೇಶನಕ್ಕೆ ಕ್ಯಾರೆ ಎನ್ನದ ಬಿಎಲ್‌ಒಗಳು ಮತ್ತೆ ರಾಜ್ಯದ ನಾನಾ ಕಡೆ ಈ ಹಿಂದೆ ನಡೆಸಿದಂತೆ ಗುಂಪು ಪ್ರಕ್ರಿಯೆ ಮೂಲಕ ಎಸ್‌ಐಆರ್ ನಡೆಸುತ್ತಿರುವುದು ಬೆಳಕಿಗೆ ಬಂದಿದೆ.

ಇದೇ ವೇಳೆ ಕರ್ನಾಟಕದಲ್ಲಿ ಇದುವರೆಗೂ ನಡೆದಿರುವ ಮತದಾರರ ಪಟ್ಟಿ ವಿಶೇಷ ಸಮಗ್ರ ಪರಿಷ್ಕರಣೆ(ಎಸ್‌ಐಆರ್)ಯನ್ನು ರದ್ದುಗೊಳಿಸಬೇಕು ಎಂದು ಕೇಂದ್ರ ಎಚ್.ಡಿ.ಕುಮಾರಸ್ವಾಮಿ ಭಾರತೀಯ ಚುನಾವಣಾ ಆಯೋಗವನ್ನು ಆಗ್ರಹಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕರ್ನಾಟಕದಲ್ಲಿ ಈಗಾಗಲೇ ನಡೆದಿರುವ ಎಸ್‌ಐಆರ್‌ಗೆ ಯಾವುದೇ ಅರ್ಥವಿಲ್ಲ. ಕೆಲವೆಡೆ ಮನೆಮನೆಗೆ ತೆರಳಿ ಎಸ್‌ಐಆರ್ ಪ್ರಕ್ರಿಯೆ ಕೈಗೊಳ್ಳುವ ಬದಲು ಕಲ್ಯಾಣ ಮಂಟಪದಲ್ಲಿ ಗಣತಿ ನಮೂನೆಯನ್ನು ನೀಡಲಾಗುತ್ತಿದೆ ಎಂದು ಆರೋಪಿಸಿದರು.

ಈ ಸಂಬಂಧ ರಾಜ್ಯ ಮುಖ್ಯ ಚುನಾವಣಾಧಿಕಾರಿಗಳಿಗೆ ಜೆಡಿಎಸ್ ವತಿಯಿಂದ




ದೂರು ಸಲ್ಲಿಸಲಾಗಿದೆ. ಆದರೆ ಅವರು ಚುನಾವಣಾ ಆಯೋಗಕ್ಕೆ ಕಳುಹಿಸಿಕೊಟ್ಟಿದ್ದು, ಅವರ ನಿರ್ದೇಶನದಂತೆ ಕ್ರಮ ಕೈಗೊಳ್ಳುವುದಾಗಿ ಹೇಳಿದ್ದಾರೆ. ಸೋಮವಾರ ದೆಹಲಿಗೆ ತೆರಳಿ ಭಾರತೀಯ ಚುನಾವಣಾ ಆಯೋಗದ ಆಯುಕ್ತರನ್ನು ಭೇಟಿ ಮಾಡಿ ಕರ್ನಾಟಕದಲ್ಲಿ ಎಸ್‌ಐಆರ್‌ಗೆ ಸಂಬಂಧಿಸಿದಂತೆ ನಡೆದಿರುವ ಘಟನೆಗಳ ಸಂಪೂರ್ಣ ವಿವರಗಳನ್ನು ನೀಡಿ ಈಗಾಗಲೇ ನಡೆದಿರುವ ಪ್ರಕ್ರಿಯೆಯನ್ನು ರದ್ದುಗೊಳಿಸುಂತೆ ಒತ್ತಾಯಿಸಲಾಗುವುದು ಎಂದರು.

ಪಾರದರ್ಶಕವಾಗಿ ಎಸ್‌ಐಆರ್ ಪ್ರಕ್ರಿಯೆಯನ್ನು ನಡೆಸುವಂತೆ ಮನವಿ ಮಾಡಲಾಗುವುದು ಎಂದ ಅವರು, ಪ್ರತಿನಿತ್ಯ ಹೇಳಿಕೆ ನೀಡುತ್ತಿದ್ದ ಕೆಪಿಸಿಸಿ ಅಧ್ಯಕ್ಷರು, ಗೃಹ ಸಚಿವರು ಕಲ್ಯಾಣ ಮಂಟಪಗಳಲ್ಲಿ ಎಸ್‌ಐಆರ್‌ಗೆ ಸಂಬಂಧಿಸಿದ ಗಣತಿ ನಮೂನೆಗಳನ್ನು ವಿತರಿಸುತ್ತಿರುವ ಬಗ್ಗೆ ಏನು ಹೇಳುತ್ತಾರೆ ಎಂದು ಪ್ರಶ್ನಿಸಿದರು.

ಸರ್ಕಾರಿ ಅಧಿಕಾರಿಗಳು ಎಸ್‌ಐಆರ್ ಪ್ರಕ್ರಿಯೆಯಲ್ಲಿ ಭಾಗಿಯಾಗಿದ್ದು, ಆಯೋಗದ ಮಾರ್ಗಸೂಚಿಯನ್ನು ಪಾಲಿಸುತ್ತಿಲ್ಲ. ಹಾದಿಬೀದಿಯಲ್ಲಿ ಎಸ್‌ಐಆರ್ ಪ್ರಕ್ರಿಯೆ ನಡೆಸಲಾಗುತ್ತಿದೆ ಎಂದು ಆರೋಪಿಸಿದ ಅವರು, ಕೆಪಿಸಿಸಿ ಅಧ್ಯಕ್ಷರು ಹಾಗೂ ಗೃಹಸಚಿವರು ಈಗ ಎಲ್ಲಿ ಹೋಗಿದ್ದಾರೆ? ಎಂದು ವಾಗ್ದಾಳಿ ನಡೆಸಿದರು.

**ಪರ್ಯಾಯ ವ್ಯವಸ್ಥೆ ಎಲ್ಲಿ:** ಸುಪ್ರೀಂಕೋರ್ಟ್‌ನ ಆದೇಶದ ಹಿನ್ನೆಲೆಯಲ್ಲಿ ಲಕ್ಷಾಂತರ ಬೀದಿಬದಿ ವ್ಯಾಪಾರಿಗಳನ್ನು ತೆರವುಗೊಳಿಸುತ್ತಿದ್ದಾರೆ. ಆದರೆ ಅವರಿಗೆ ಪರ್ಯಾಯ ವ್ಯವಸ್ಥೆ ಏನು ಕಲ್ಪಿಸಿದ್ದಾರೆ ಎಂದು ಪ್ರಶ್ನಿಸಿದರು.

ಕಾನೂನು ಬಗ್ಗೆ ಮಾತನಾಡುವ ಸರ್ಕಾರದವರು ಬೀದಿಬದಿ ವ್ಯಾಪಾರಿಗಳ ಬದುಕಿನ ಬಗ್ಗೆಯೂ ಚರ್ಚೆ ಮಾಡಬೇಕಲ್ಲವೇ ಅವರಿಗೆ ಪರ್ಯಾಯದ ವ್ಯವಸ್ಥೆ ಹಾಗೂ ಪರಿಹಾರವನ್ನು ನೀಡಬೇಕಾದುದು ಸರ್ಕಾರದ ಜವಾಬ್ದಾರಿಯಲ್ಲವೇ ಎಂದು ಕೇಳಿದರು. ಮುಖ್ಯಮಂತ್ರಿಯಾಗಿ ಡಿ.ಕೆ.ಶಿವಕುಮಾರ್‌ರವರು ಒಂದು ತಿಂಗಳು ಪೂರ್ಣಗೊಳಿಸಿದ್ದಾರೆ. ಈ ಅವಧಿಯಲ್ಲಿ ಘೋಷಣೆ ಮಾಡುವುದನ್ನು ಬಿಟ್ಟರೆ ಏನೂ ಸಾಧನೆ ಮಾಡಿಲ್ಲ. ಒಂದು ತಿಂಗಳಿನಲ್ಲಿ ಅನುಷ್ಠಾನವಾಗಿರುವುದು ಯಾವುದೂ ಇಲ್ಲ.

ಭಾರತ್ ಜೋಡೋ ಹೆಸರಿನಲ್ಲಿ ಅವರ ಪಕ್ಷದ ಕಾರ್ಯಕರ್ತರಿಗೆ ಹಣ ನೀಡುವುದಾಗಿ ಹೇಳಿದ್ದಾರೆ. ಜನರಿಗೆ ತೆರಿಗೆ ಹೊರೆ ಹೊರಿಸುತ್ತಿದ್ದಾರೆ. ದೊಡ್ಡ ಯೋಜನೆಗಳ ಅನುಷ್ಠಾನಕ್ಕೆ ಮುಂದಾಗುವ ಮೂಲಕ ದುಡ್ಡು ಹೊಡೆಯುವ ಕಾರ್ಯಕ್ಕೆ ಚಾಲನೆ ನೀಡುತ್ತಿದ್ದಾರೆ ಎಂದು ಕುಮಾರಸ್ವಾಮಿ ಆರೋಪಿಸಿದರು.

# ಕೆ. ಹೊಸಕೋಟೆಯಲ್ಲಿ ಅಂಬೇಡ್ಕರ್ ಭವನಕ್ಕೆ ಶಾಸಕ ಸಿಮೆಂಟ್ ಮಂಜು ಶಂಕುಸ್ಥಾಪನೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಆಲೂರು: ಸಮುದಾಯ ಭವನಗಳು ಕೇವಲ ಕಟ್ಟಡಗಳಾಗಿರದೆ, ಸಮಾಜಮುಖಿ ಚಟುವಟಿಕೆಗಳು, ಚರ್ಚೆ ಹಾಗೂ ವಿಚಾರ ವಿನಿಮಯದ ಕೇಂದ್ರಗಳಾಗಬೇಕು ಎಂದು ಶಾಸಕ ಸಿಮೆಂಟ್ ಮಂಜು ಹೇಳಿದರು.

ತಾಲೂಕಿನ ಕೆ. ಹೊಸಕೋಟೆ ಹೋಬಳಿ ಕೇಂದ್ರದಲ್ಲಿ ನೂತನ ಅಂಬೇಡ್ಕರ್ ಭವನ ನಿರ್ಮಾಣ ಕಾಮಗಾರಿಗೆ ಭೂಮಿಪೂಜೆ ನೆರವೇರಿಸಿ ಅವರು ಮಾತನಾಡಿದರು.

ಡಾ. ಬಿ.ಆರ್. ಅಂಬೇಡ್ಕರ್ ಅವರು ರಚಿಸಿದ ಸಂವಿಧಾನದಿಂದಲೇ ಇಂದು ಸಮಾಜದ ಎಲ್ಲ ವರ್ಗದ ಜನರಿಗೆ ಸಮಾನ ಅವಕಾಶ ದೊರೆತಿದೆ. ಶತಮಾನಗಳಿಂದ ಅವಕಾಶ ವಂಚಿತರಾಗಿದ್ದ ಸಮುದಾಯಗಳಿಗೆ ರಾಜಕೀಯ, ಶೈಕ್ಷಣಿಕ ಹಾಗೂ ಆರ್ಥಿಕವಾಗಿ ಸ್ವಾವಲಂಬಿ ಬದುಕು ಕಟ್ಟಿಕೊಳ್ಳಲು ಸಂವಿಧಾನ ಬಲವಾದ ಅಡಿಪಾಯ ಹಾಕಿದೆ ಎಂದು ಹೇಳಿದರು.

ಬಾಬಾಸಾಹೇಬರ ಕನಸು



ನನಸಾಗಬೇಕಾದರೆ ಅವರು ತೋರಿದ ಸಮಾನತೆ, ಸಾಮಾಜಿಕ ನ್ಯಾಯ ಹಾಗೂ ಅಭಿವೃದ್ಧಿಯ ಮಾರ್ಗದಲ್ಲಿ ಎಲ್ಲರೂ ಸಾಗಬೇಕು. ಶೋಷಿತ ಮತ್ತು ಹಿಂದುಳಿದ ಸಮುದಾಯಗಳ ಅಭಿವೃದ್ಧಿಗೆ ಪ್ರತಿಯೊಬ್ಬರೂ ತಮ್ಮ ಜವಾಬ್ದಾರಿಯನ್ನು ಅರಿತು ಕಾರ್ಯನಿರ್ವಹಿಸಿದಾಗ ಮಾತ್ರ ದೇಶದ ಅಭಿವೃದ್ಧಿಗೂ ಕೊಡುಗೆ ನೀಡಲು ಸಾಧ್ಯವಾಗುತ್ತದೆ ಎಂದು ತಿಳಿಸಿದರು.

ಗ್ರಾಮಸ್ಥರು ಭವನದ ನಿರ್ಮಾಣದ ಗುಣಮಟ್ಟಕ್ಕೆ ಆದ್ಯತೆ ನೀಡಬೇಕು. ಕಟ್ಟಡ ನಿರ್ಮಿಸಿ ಹಾಗೆಯೇ ಬಿಡದೆ, ಸಮುದಾಯದ ಅಭಿವೃದ್ಧಿಗೆ ಪೂರಕವಾದ ಸಭೆ, ತರಬೇತಿ, ಸಾಮಾಜಿಕ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳ ಕೇಂದ್ರವಾಗಿ ಬಳಸಿಕೊಳ್ಳಬೇಕು ಎಂದು ಸಲಹೆ ನೀಡಿದರು.

ಈ ಭಾಗದಲ್ಲಿ ಸರ್ಕಾರಿ ಸಮುದಾಯ ಭವನದ ಕೊರತೆ ಇದ್ದು, ಹೊಸ ಭವನ ನಿರ್ಮಾಣದಿಂದ ಸಾರ್ವಜನಿಕರಿಗೆ ಸಭೆ-ಸಮಾರಂಭಗಳನ್ನು ನಡೆಸಲು ಅನುಕೂಲವಾಗಲಿದೆ. ಜೊತೆಗೆ ಬಹುಕಾಲದ ನಾಗರಿಕರ ಬೇಡಿಕೆಯೂ ಈಡೇರುವಂತಾಗಿದೆ ಎಂದರು.

ಈ ವೇಳೆ ಗ್ರಾಮಸ್ಥರು ಮಾತನಾಡಿ, ಹಲವು ವರ್ಷಗಳಿಂದ ಕೆ. ಹೊಸಕೋಟೆ ಹೋಬಳಿ ಕೇಂದ್ರದಲ್ಲಿ ಅಂಬೇಡ್ಕರ್ ಭವನ ನಿರ್ಮಾಣಕ್ಕೆ ಮನವಿ ಸಲ್ಲಿಸುತ್ತಿದ್ದರೂ ಯಾವುದೇ ಕ್ರಮವಾಗಿರಲಿಲ್ಲ. ಇದೀಗ ಶಾಸಕ ಸಿಮೆಂಟ್ ಮಂಜು ಅವರ ಪ್ರಯತ್ನದಿಂದ ಕಾಮಗಾರಿಗೆ ಚಾಲನೆ ದೊರೆತಿರುವುದು ಹೋಬಳಿ ಕೇಂದ್ರದ ಜನತೆಗೆ ಸಂತಸ ತಂದಿದೆ ಎಂದು ಹರ್ಷ ವ್ಯಕ್ತಪಡಿಸಿದರು.

ಕಾರ್ಯಕ್ರಮದಲ್ಲಿ ಕಂದಾಯ ನಿರೀಕ್ಷಕ ಗೋವಿಂದರಾಜು, ಮಲ್ಲಾಪುರ ಗ್ರಾಮ ಪಂಚಾಯಿತಿ ಪಿಡಿಒ ವೀರಭದ್ರಯ್ಯ, ಮಾಜಿ ಗ್ರಾಮ ಪಂಚಾಯಿತಿ ಸದಸ್ಯ ಚಂದನ್ ಹೈದೂರು, ಬಿಜೆಪಿ ಮುಖಂಡ ಪ್ರಸಾದ್, ಗ್ರಾಮ ಮುಖಂಡರಾದ ಮೋಹನ್ ಕಾಡ್ಲೂರು, ಚಂದ್ರಶೇಖರ್ ಕೆ.ಕೆ., ಗ್ರಾಮಸ್ಥರು ಹಾಗೂ ಬಿಜೆಪಿ ಕಾರ್ಯಕರ್ತರು ಉಪಸ್ಥಿತರಿದ್ದರು.

# ಶಾಲೆಗಳ ಉಳಿವಿಗೆ ಸರ್ಕಾರ ಗಂಭೀರ ಚಿಂತನೆ ನಡೆಸಬೇಕು: ಶಾಸಕ ಸಿಮೆಂಟ್ ಮಂಜು

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಆಲೂರು: ಸರ್ಕಾರಿ ಶಾಲೆಗಳ ಉಳಿವು ಮತ್ತು ಅಭಿವೃದ್ಧಿ ಕುರಿತು ರಾಜ್ಯ ಸರ್ಕಾರ ಗಂಭೀರ ಚಿಂತನೆ ನಡೆಸಿ ಅಗತ್ಯ ಕ್ರಮಗಳನ್ನು ಕೈಗೊಳ್ಳಬೇಕು ಎಂದು ಶಾಸಕ ಸಿಮೆಂಟ್ ಮಂಜು ಹೇಳಿದರು.

ತಾಲೂಕಿನ ಕೆ. ಹೊಸಕೋಟೆ ಹೋಬಳಿ, ಮಲ್ಲಾಪುರ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಕಾಡ್ಲೂರು ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ನಿರ್ಮಿಸಲಾದ ನೂತನ ಶೌಚಾಲಯವನ್ನು ಶುಕ್ರವಾರ ಉದ್ಘಾಟಿಸಿ ಅವರು ಮಾತನಾಡಿದರು.

ಸರ್ಕಾರಿ ಶಾಲೆಗಳು ಉಳಿದು ಬೆಳೆಯುವುದು ಸಮಾಜದ ಭವಿಷ್ಯದ ದೃಷ್ಟಿಯಿಂದ ಅತ್ಯಂತ ಮಹತ್ವದ್ದಾಗಿದೆ. ಪ್ರತಿಯೊಬ್ಬ ಮಗುವಿಗೂ ಗುಣಮಟ್ಟದ ಹಾಗೂ ಮೂಲಭೂತ ಶಿಕ್ಷಣ ದೊರೆಯಬೇಕು ಎಂಬುದು ಸರ್ಕಾರದ ಆದ್ಯತೆಯಾಗಬೇಕು. ಸರ್ಕಾರಿ ಶಾಲೆಗಳು ಒಂದೊಂದಾಗಿ ಮುಚ್ಚಿದರೆ ಬಡವರು, ರೈತಾಪಿ ಕುಟುಂಬಗಳು ಹಾಗೂ ಮಧ್ಯಮ ವರ್ಗದ ಮಕ್ಕಳಿಗೆ ಶಿಕ್ಷಣ ದುಬಾರಿಯಾಗಿ, ಕೈಗೆಟುಕದಂತಾಗುವ ಅಪಾಯವಿದೆ ಎಂದು ಎಚ್ಚರಿಸಿದರು.

ಶಿಕ್ಷಣ ಕ್ಷೇತ್ರದ ಅಭಿವೃದ್ಧಿಗೆ ಸರ್ಕಾರ ತನ್ನ




ಜವಾಬ್ದಾರಿಯನ್ನು ಸಮರ್ಪಕವಾಗಿ ನಿರ್ವಹಿಸಬೇಕು. ಕ್ಷೇತ್ರದ ಶಾಸಕನಾಗಿ ಸರ್ಕಾರಿ ಶಾಲೆಗಳ ಅಭಿವೃದ್ಧಿಗೆ ಅಗತ್ಯ ಮೂಲಸೌಕರ್ಯ ಕಲ್ಪಿಸುವ ನಿಟ್ಟಿನಲ್ಲಿ ಪ್ರಾಮಾಣಿಕವಾಗಿ ಕಾರ್ಯನಿರ್ವಹಿಸುತ್ತೇನೆ ಎಂದು ಹೇಳಿದರು.

### ಮೂಲಸೌಕರ್ಯ ಇದ್ದರೆ ಮಕ್ಕಳ ದಾಖಲಾತಿ ಹೆಚ್ಚಳ

ಸರ್ಕಾರಿ ಶಾಲೆಗಳ ಅಳಿವು-ಉಳಿವು ಶಿಕ್ಷಕರು, ಪೋಷಕರು ಮತ್ತು ಜನಪ್ರತಿನಿಧಿಗಳ ಸಮನ್ವಯದ ಮೇಲೆ ಅವಲಂಬಿತವಾಗಿದೆ. ತಾವು ಕ್ಷೇತ್ರ ಪ್ರವಾಸದ ವೇಳೆ ಸರ್ಕಾರಿ ಶಾಲೆಗಳು, ಅಂಗನವಾಡಿಗಳು ಹಾಗೂ ಸರ್ಕಾರಿ ಆಸ್ಪತ್ರೆಗಳಿಗೆ ಕಡ್ಡಾಯವಾಗಿ ಭೇಟಿ ನೀಡಿ ಅಲ್ಲಿನ ಸಮಸ್ಯೆಗಳನ್ನು ತಿಳಿದು ಪರಿಹಾರಕ್ಕೆ ಕ್ರಮ ಕೈಗೊಳ್ಳುತ್ತೇನೆ ಎಂದು ತಿಳಿಸಿದರು.

ಶಾಲೆಗಳಲ್ಲಿ ಉತ್ತಮ ಕಟ್ಟಡ, ಸುಸಜ್ಜಿತ ಶೌಚಾಲಯ, ಆಟದ ಮೈದಾನ ಹಾಗೂ ಅಗತ್ಯ ಮೂಲಸೌಕರ್ಯಗಳ ಜೊತೆಗೆ ಗುಣಮಟ್ಟದ ಬೋಧನೆ ದೊರೆತರೆ ಪೋಷಕರಲ್ಲಿ ವಿಶ್ವಾಸ ಮೂಡಿ ಮಕ್ಕಳ ದಾಖಲಾತಿಯೂ ಹೆಚ್ಚುತ್ತದೆ ಎಂದರು.


ಮಲೆನಾಡು ಪ್ರದೇಶದಲ್ಲಿ ಆನೆ ಹಾವಳಿ ಹಾಗೂ ಗ್ರಾಮಗಳ ನಡುವಿನ ದೂರ ಹೆಚ್ಚಿರುವ ಹಿನ್ನೆಲೆಯಲ್ಲಿ ಪ್ರತಿ ಹಳ್ಳಿಯಲ್ಲೂ ಸರ್ಕಾರಿ ಶಾಲೆಗಳು ಉಳಿಯುವುದು ಅತ್ಯಗತ್ಯ. ಆದ್ದರಿಂದ ಶಿಕ್ಷಕರು, ಪೋಷಕರು ಹಾಗೂ ಗ್ರಾಮಸ್ಥರು ಪ್ರತಿವರ್ಷ ಮಕ್ಕಳ ದಾಖಲಾತಿ ಹೆಚ್ಚಿಸಲು ಒಟ್ಟಾಗಿ ಶ್ರಮಿಸಬೇಕು ಎಂದು ಕರೆ ನೀಡಿದರು.

ಸರ್ಕಾರಿ ಶಾಲೆಗಳನ್ನು ಉಳಿಸುವುದು ಸಮಾಜದ ಪ್ರತಿಯೊಬ್ಬರ ಜವಾಬ್ದಾರಿಯಾಗಿದೆ. ಎಲ್ಲರೂ ಕೈಜೋಡಿಸಿ ಮಕ್ಕಳಿಗೆ ಗುಣಮಟ್ಟದ ಶಿಕ್ಷಣ ಹಾಗೂ ಉತ್ತಮ ಫಲಿತಾಂಶ ದೊರೆಯುವಂತೆ ಕೆಲಸ ಮಾಡಿದರೆ ಅವರ ಶೈಕ್ಷಣಿಕ ಭವಿಷ್ಯ ಮತ್ತಷ್ಟು ಉಜ್ವಲವಾಗಲಿದೆ ಎಂದು ಶಾಸಕ ಸಿಮೆಂಟ್ ಮಂಜು ಹೇಳಿದರು.

ಈ ಸಂಧರ್ಭದಲ್ಲಿ ಕ್ಷೇತ್ರ ಶಿಕ್ಷಣಾಧಿಕಾರಿ ಕೃಷ್ಣೆಗೌಡ, ಈ ಸಿ ಓ ಮಂಜುಳಾ, ಸಿ ಆರ್ ಪಿ ಮೈಮುನಾ ಶಾಲಾ ಮುಖ್ಯ ಶಿಕ್ಷಕಿ ಮಣಿ ಸಹ ಶಿಕ್ಷಕರುಗಳಾದ ಭಾನುಮತಿ, ಕವಿತಾ, ಸಚಿನ್,ಮಾಜಿ ಗ್ರಾಮ ಪಂಚಾಯತಿ ಸದಸ್ಯ ಚಂದನ್ ಹೈದೂರು,ಬಿಜೆಪಿ ಮುಖಂಡ ಪ್ರಸಾದ್, ಕಾಡ್ಲು ಗ್ರಾಮದ ಮುಖಂಡರುಗಳಾದ ಮೋಹನ್ ಕಾಡ್ಲೂರು,ಮಂಜುನಾಥ್ ,ಜಗದೀಶ್, ಕೆಂಚಯ್ಯ ,ಕೆಂಚಪ್ಪ ಸೇರಿದಂತೆ ಮುಂತಾದವರು ಉಪಸ್ಥಿತರಿದ್ದರು.

# ಶಿರಾಡಿ ರಾಷ್ಟ್ರೀಯ ಹೆದ್ದಾರಿ 75 ರಲ್ಲಿ ಲಾರಿ ಪಲ್ಟಿಯಾಗಿ 1 ಗಂಟೆಗೂ ಹೆಚ್ಚು ಕಾಲ ಟ್ರಾಫಿಕ್ ಜಾಮ್






**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ತಾಲ್ಲೂಕಿನ ಮಾರನಹಳ್ಳಿ ಸಮಿಪ ಬೆಂಗಳೂರು ಮಂಗಳೂರು ರಾಷ್ಟ್ರೀಯ ಹೆದ್ದಾರಿ ಶಿರಾಡಿ ಘಾಟ್ ನ ಮಾರನಹಳ್ಳಿ ಸಮೀಪ ಶನಿವಾರ ಬೆಳಗ್ಗೆ ಸಿಮೆಂಟ್ ಇಟ್ಟಿಗೆ ಸಾಗಿಸುತಿದ್ದ ಲಾರಿ ಯೊಂದು ರಸ್ತೆ ತಿರುವಿನಲ್ಲಿ ಪಲ್ಟಿಯಾದ ಕಾರಣ ಸುಮಾರು 2 ಕೀ ಮಿ ನಷ್ಟ ಉದ್ದ ರಸ್ತೆಯಲ್ಲಿ ಬಾರಿ ಹಾಗೂ ಲಘು ವಾಹನಗಳು ಸಾಲುಗಟ್ಟಿ ನಿಲ್ಲ ಬೇಕಾಯಿತು. ನಂತರ ಪೊಲಿಸರು ಸ್ಥಳಕ್ಕೆ ಆಗಮಿಸಿ ವಾಹನ ಸಂಚಾರವನ್ನು ಸುಗಮಗೊಳಿಸಿದರು

# ವೈದ್ಯರ ದಿನಾಚರಣೆ ಅಂಗವಾಗಿ ಉಚಿತ ಆರೋಗ್ಯ ತಪಾಸಣಾ ಶಿಬಿರ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಸಮಾಜ ಸೇವೆಯನ್ನು ತನ್ನ ಧ್ಯೇಯವನ್ನಾಗಿಸಿಕೊಂಡಿರುವ ಹಾಸನ ಲಯನ್ಸ್ ಕ್ಲಬ್ ಮತ್ತು ರೋಟರಿ ಕ್ಲಬ್ ಆಫ್ ಹಾಸನ್ ಸನ್‌ರೈಸ್ ವತಿಯಿಂದ ಶನಿವಾರ ಎಚ್.ಎನ್. ಪುರ ರಸ್ತೆಯ ಪುಣ್ಯ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆ ಆವರಣದಲ್ಲಿ ಉಚಿತ ಆರೋಗ್ಯ ತಪಾಸಣಾ ಶಿಬಿರ ಹಾಗೂ ಉಚಿತ ಔಷಧಿ ನೀಡುವ ಹಾಗೂ ವೈದ್ಯರ ದಿನಾಚರಣೆ ಕಾರ್ಯಕ್ರಮ ಯಶಸ್ವಿಯಾಗಿ ನಡೆಸಲಾಯಿತು.

ಇದೇ ವೇಳೆ ಪುಣ್ಯ ಆಸ್ಪತ್ರೆ ಮುಖ್ಯಸ್ಥ ಮಹೇಶ್, ಲಯನ್ಸ್ ಕ್ಲಬ್ ಅಧ್ಯಕ್ಷ ವೆಂಕಟೇಶ್, ಜನರಲ್ ಫಿಸಿಶಿಯನ್ ಡಾ.ನಂದನ್ ಮಾಧ್ಯಮದೊಂದಿಗೆ ಮಾತನಾಡಿ, ಸಾರ್ವಜನಿಕರಲ್ಲಿ ಆರೋಗ್ಯ ಜಾಗೃತಿ ಮೂಡಿಸುವುದು, ಆರಂಭಿಕ ಹಂತದಲ್ಲಿಯೇ ವಿವಿಧ ಕಾಯಿಲೆ ಪತ್ತೆಹಚ್ಚಿ ಸೂಕ್ತ ಚಿಕಿತ್ಸೆ ಪಡೆಯಲು




ಪ್ರೇರೇಪಿಸುವ ಉದ್ದೇಶದಿಂದ ಹಮ್ಮಿಕೊಂಡಿದ್ದ ಈ ಶಿಬಿರಕ್ಕೆ ನೂರಾರು ಮಂದಿ ಆಗಮಿಸಿ ಆರೋಗ್ಯ ತಪಾಸಣೆ ಸೌಲಭ್ಯ ಪಡೆದುಕೊಂಡರು.

ಶಿಬಿರದಲ್ಲಿ ಮಧುಮೇಹ, ಅಧಿಕ ರಕ್ತದೊತ್ತಡ, ಅಸ್ತಮಾ, ಥೈರಾಯ್ಡ್, ಸಿಒಪಿಡಿ ಸೇರಿದಂತೆ ವಿವಿಧ ದೀರ್ಘಕಾಲೀನ ಹಾಗೂ ಸಾಮಾನ್ಯ ಆರೋಗ್ಯ ಸಮಸ್ಯೆಗಳ ತಪಾಸಣೆ ನಡೆಸಲಾಯಿತು. ಅನುಭವಿ ವೈದ್ಯರು ಪ್ರತಿಯೊಬ್ಬರ ಆರೋಗ್ಯ ಸ್ಥಿತಿಯನ್ನು ಪರಿಶೀಲಿಸಿ ಅಗತ್ಯ ಸಲಹೆ, ಚಿಕಿತ್ಸೆಯ ಮಾರ್ಗದರ್ಶನ ಹಾಗೂ ಜೀವನಶೈಲಿ ಬದಲಾವಣೆಗಳ ಕುರಿತು ಮಾಹಿತಿ ನೀಡಿದರು.

ಇತ್ತೀಚಿನ ದಿನಗಳಲ್ಲಿ ಅನಾರೋಗ್ಯಕರ ಜೀವನಶೈಲಿ, ಒತ್ತಡ, ಅಸಮರ್ಪಕ ಆಹಾರ ಪದ್ಧತಿ ಹಾಗೂ ದೈಹಿಕ ಚಟುವಟಿಕೆಯ ಕೊರತೆಯಿಂದ ಮಧುಮೇಹ, ರಕ್ತದೊತ್ತಡ ಮತ್ತು ಉಸಿರಾಟ ಸಂಬಂಧಿತ ಕಾಯಿಲೆಗಳು ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ ಇಂತಹ ಉಚಿತ ಆರೋಗ್ಯ ಶಿಬಿರಗಳು ಸಾರ್ವಜನಿಕರಿಗೆ ಅತ್ಯಂತ ಉಪಯುಕ್ತವಾಗಿವೆ ಎಂದು ವೈದ್ಯರು ಅಭಿಪ್ರಾಯಪಟ್ಟರು.

ಆರೋಗ್ಯ ಸಮಸ್ಯೆಗಳನ್ನು ನಿರ್ಲಕ್ಷಿಸದೆ ನಿಯಮಿತವಾಗಿ ಆರೋಗ್ಯ ತಪಾಸಣೆ ಮಾಡಿಸಿಕೊಳ್ಳುವುದು, ವೈದ್ಯರ ಸಲಹೆಯಂತೆ ಚಿಕಿತ್ಸೆ ಪಡೆಯುವುದು ಮತ್ತು ಸಮತೋಲನ ಆಹಾರ, ವ್ಯಾಯಾಮ ಹಾಗೂ ಆರೋಗ್ಯಕರ ಜೀವನಶೈಲಿಯನ್ನು ರೂಢಿಸಿಕೊಳ್ಳುವುದು ಅತ್ಯಗತ್ಯ ಎಂದು ಶಿಬಿರದಲ್ಲಿ ತಿಳಿಸಲಾಯಿತು.

ಶಿಬಿರದಲ್ಲಿ ಪಾಲ್ಗೊಂಡ ಸಾರ್ವಜನಿಕರು ಲಯನ್ಸ್ ಕ್ಲಬ್ ಹಾಗೂ ಪುಣ್ಯ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆಯ ಸಾಮಾಜಿಕ ಕಳಕಳಿಯನ್ನು ಶ್ಲಾಘಿಸಿ, ಇಂತಹ ಜನೋಪಯೋಗಿ ಕಾರ್ಯಕ್ರಮಗಳನ್ನು ನಿರಂತರವಾಗಿ ಆಯೋಜಿಸುವಂತೆ ಮನವಿ ಮಾಡಿದರು.

ಕಾರ್ಯಕ್ರಮದ ಯಶಸ್ಸಿಗೆ ಹಾಸನ ಲಯನ್ಸ್ ಕ್ಲಬ್‌ನ ಅಧ್ಯಕ್ಷ ವೆಂಕಟೇಶ್, ಕಾರ್ಯದರ್ಶಿ ನಾಗರಾಜ್ ಹಾಗೂ ಖಜಾಂಚಿ ಪಂಚಾಕ್ಷರಿ, ರಾಯಭಾರಿಗಳಾದ

ಅಶೋಕ್ ಕುಮಾರ್, ಮಲ್ಲೇಶ್ ಗೌಡ, ಪ್ರಾಂತಿಯ ಅಧ್ಯಕ್ಷ ಹೆಚ್.ಕೆ. ನಾಗೇಶ್, ಮಾಜಿ ಅಧ್ಯಕ್ಷ ಐ.ಜಿ. ರಮೇಶ್, ಮಾಜಿ ಕಾರ್ಯದರ್ಶಿ ಸಿ. ಶಿವಸ್ವಾಮಿ, ಹೆಚ್.ಕೆ. ಕಿರಣ್, ರೋಟರಿ ಕ್ಲಬ್ ಆಫ್ ಹಾಸನ್ ಸನ್ರೈಸ್ ಅಧ್ಯಕ್ಷ ಕೆ.ಎಸ್. ಯೋಗೇಶ್, ಕಾರ್ಯದರ್ಶಿ ಬಿ.ಎಂ. ದರ್ಶನ್ ಅವರ ನೇತೃತ್ವದಲ್ಲಿ ಕ್ಲಬ್‌ನ ಪದಾಧಿಕಾರಿಗಳು ಮತ್ತು ಸದಸ್ಯರು ಶ್ರಮಿಸಿದರು.

# ಎಸ್‌ಡಿಎಂ ಆಯುರ್ವೇದ ಕಾಲೇಜಿನಲ್ಲಿ
## ಅಗ್ನಿ ದುರಂತ ನಿರ್ವಹಣೆ ಅಣಕು ಪ್ರದರ್ಶನ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಅಗ್ನಿ ಅನಾಹುತ ಸಂಭವಿಸಿದ ಸಂದರ್ಭದಲ್ಲಿ ಸಿಬ್ಬಂದಿ ಹಾಗೂ ವಿದ್ಯಾರ್ಥಿಗಳು ತುರ್ತು ಪರಿಸ್ಥಿತಿಯನ್ನು ಸಮರ್ಥವಾಗಿ ಎದುರಿಸುವ ಉದ್ದೇಶದಿಂದ ನಗರದ ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಆಯುರ್ವೇದ ಕಾಲೇಜು ಮತ್ತು ಆಸ್ಪತ್ರೆಯಲ್ಲಿ ಅಗ್ನಿ ದುರಂತ ನಿರ್ವಹಣೆಯ ಅಣಕು ಪ್ರದರ್ಶನ ಯಶಸ್ವಿಯಾಗಿ ನಡೆಯಿತು.

ಜಿಲ್ಲಾ ಅಗ್ನಿಶಾಮಕ ಮತ್ತು ತುರ್ತು ಸೇವೆಗಳ ಇಲಾಖೆ ಸಹಯೋಗದಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ವೈದ್ಯಕೀಯ ಹಾಗೂ ಅರೆ ವೈದ್ಯಕೀಯ ಸಿಬ್ಬಂದಿ ಒಳಗೊಂಡಂತೆ ಟ್ರಾನ್ಸ್‌ಪೋರ್ಟೇಶನ್, ಪ್ರಥಮ ಚಿಕಿತ್ಸೆ, ಅಗ್ನಿಶಾಮಕ, ಸೈಟ್ ಸೀನ್, ಎವಾಕ್ಯುವೇಷನ್ ಹಾಗೂ ಮೀಡಿಯಾ ಮ್ಯಾನೇಜ್‌ಮೆಂಟ್ ಸೇರಿ ಆರು ತಂಡಗಳನ್ನು ರಚಿಸಿ ಕಾರ್ಯಾಚರಣೆ ನಡೆಸಲಾಯಿತು.

ಅಣಕು ಪ್ರದರ್ಶನದ ಅಂಗವಾಗಿ ಕಾಲೇಜಿನ ಕಟ್ಟಡದಲ್ಲಿ ಕೃತಕ ಅಗ್ನಿ ಅವಘಡ ಸೃಷ್ಟಿಸಿ, ಸುರಕ್ಷತಾ ಅಧಿಕಾರಿಗಳ ಸೂಚನೆಯಂತೆ ತುರ್ತು ಕಾರ್ಯಾಚರಣೆ ಆರಂಭಿಸಲಾಯಿತು.

ಸಾರ್ವಜನಿಕ ಘೋಷಣೆ ವ್ಯವಸ್ಥೆಯ ಮೂಲಕ ಸಿಬ್ಬಂದಿ,



ರೋಗಿಗಳು ಹಾಗೂ ವಿದ್ಯಾರ್ಥಿಗಳಿಗೆ ಮಾಹಿತಿ ನೀಡಲಾಗಿದ್ದು, ಕಟ್ಟಡದಲ್ಲಿದ್ದ ಎಲ್ಲ ಲಿಫ್ಟ್‌ಗಳನ್ನು ಸ್ಥಗಿತಗೊಳಿಸಿ ಮೆಟ್ಟಿಲುಗಳ ಮೂಲಕ ಸುರಕ್ಷಿತವಾಗಿ ಹೊರಕ್ಕೆ ಸ್ಥಳಾಂತರಿಸಲಾಯಿತು.

ಕಾರ್ಯಾಚರಣೆ ವೇಳೆ ವಿವಿಧ ರೀತಿಯ ಗಾಯಾಳುಗಳನ್ನು ಸೃಷ್ಟಿಸಿ ಅವರಿಗೆ ಪ್ರಥಮ ಚಿಕಿತ್ಸೆ, ಬೇಸಿಕ್ ಲೈಫ್ ಸಪೋರ್ಟ್, ಆಂಬ್ಯುಲೆನ್ಸ್ ಹಾಗೂ ವ್ಹೀಲ್‌ಚೇರ್ ಮೂಲಕ ತುರ್ತು ಚಿಕಿತ್ಸಾ ವಿಭಾಗಕ್ಕೆ ಸಾಗಿಸುವ ಪ್ರಕ್ರಿಯೆ ಪ್ರದರ್ಶಿಸಲಾಯಿತು.

ಅಲ್ಲದೆ ಸುರಕ್ಷಿತ ಸಮಾವೇಶ ಸ್ಥಳಕ್ಕೆ ಜನರನ್ನು ಸ್ಥಳಾಂತರಿಸುವ ಕ್ರಮವನ್ನೂ ಯಶಸ್ವಿಯಾಗಿ ಅನುಷ್ಠಾನಗೊಳಿಸಲಾಯಿತು.

ಅಗ್ನಿಶಾಮಕ ತಂಡವು ಎಬಿಸಿ ಹಾಗೂ ಕಾರ್ಬನ್ ಡೈಆಕ್ಸೈಡ್ ಅಗ್ನಿಶಾಮಕ ಉಪಕರಣಗಳು ಮತ್ತು ಹೈಡ್ರಂಟ್ ವ್ಯವಸ್ಥೆಯನ್ನು ಬಳಸಿ ಬೆಂಕಿ ನಿಯಂತ್ರಿಸುವ ವಿಧಾನ ಪ್ರದರ್ಶಿಸಿತು. ಮೀಡಿಯಾ ಮ್ಯಾನೇಜ್ಮೆಂಟ್ ತಂಡವು ಘಟನೆಯ ವರದಿ ಸಿದ್ಧಪಡಿಸಿ ತುರ್ತು ಪರಿಸ್ಥಿತಿಯಲ್ಲಿ ಮಾಹಿತಿ ನಿರ್ವಹಣೆಯ ಮಹತ್ವ ವಿವರಿಸಿತು.

ಈ ಕಾರ್ಯದಲ್ಲಿ 750ಕ್ಕೂ ಹೆಚ್ಚು ವಿದ್ಯಾರ್ಥಿಗಳು ಭಾಗವಹಿಸಿದ್ದರು.

ಸಂಸ್ಥೆಯ ನಿರ್ದೇಶಕ ಡಾ. ಪ್ರಸನ್ನ ನರಸಿಂಹ ರಾವ್, ಪ್ರಾಂಶುಪಾಲೆ ಡಾ. ಶೈಲಜಾ ಉಪ್ಪಿನಕುದುರು, ಆಸ್ಪತ್ರೆಯ ವೈದ್ಯಕೀಯ ಅಧೀಕ್ಷಕ ಡಾ. ಮುರಳೀಧರ ಪಿ. ಪೂಜಾರ್, ಎಸ್ಟೇಟ್ ಮತ್ತು ಸುರಕ್ಷತಾ ಅಧಿಕಾರಿ ಅರುಣ್ ಕುಮಾರ್ ಹಾಗೂ ಜಿಲ್ಲಾ ಅಗ್ನಿಶಾಮಕ ಅಧಿಕಾರಿ ಕೆ.ಪಿ. ನವೀನ್ ಅವರ ಮಾರ್ಗದರ್ಶನದಲ್ಲಿ ಕಾರ್ಯಕ್ರಮ ಯಶಸ್ವಿಯಾಗಿ ನೆರವೇರಿತು. ಅಣಕು ಪ್ರದರ್ಶನಕ್ಕೆ ಸಿಬ್ಬಂದಿ ಹಾಗೂ ವಿದ್ಯಾರ್ಥಿಗಳು ಮೆಚ್ಚುಗೆ ವ್ಯಕ್ತಪಡಿಸಿದರು.

# ಮಲೇಷ್ಯಾದಲ್ಲಿ ಹಾಸನ ಮಕ್ಕಳ ಸಾಧನೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ನಗರದ ಎಂಜಿ ರಸ್ತೆಯ ವಿ3 ಡ್ಯಾನ್ಸ್ ಕಂಪನಿಯ ಮಕ್ಕಳು ಮಲೇಷಿಯಾದಲ್ಲಿ ನಡೆದ ಅಂತಾರಾಷ್ಟ್ರೀಯ ನೃತ್ಯ ಸ್ಪರ್ಧೆಯಲ್ಲಿ 9 ಚಿನ್ನದ ಪದಕ ಗೆಲ್ಲುವ ಮೂಲಕ ವಿಶೇಷ ಸಾಧನೆ ಮಾಡಿದ್ದಾರೆ.

ಇಂದು ಸುದ್ದಿಗೋಷ್ಟಿಯಲ್ಲಿ ಈ ವಿಷಯ ತಿಳಿಸಿದ ನೃತ್ಯ ಸಂಯೋಜಕ ರಾಕೇಶ್ ಮಾತನಾಡಿ, ನಾವು ಕಷ್ಟಪಟ್ಟಿದ್ದಕ್ಕೆ ಉತ್ತಮ ಫಲಿತಾಂಶ ಸಿಕ್ಕಿದ್ದಕ್ಕೆ ಸಂತೋಷವಾಗುತ್ತಿದೆ. ಕನ್ನಡದ ಕೀರ್ತಿ ಪತಾಕೆಯನ್ನು ದೂರದ ಊರಿನಲ್ಲಿ ಹಾರಿಸಿದ್ದು ಸಂತೋಷ ತಂದಿದೆ ಎಂದರು.

ಇದಕ್ಕೆ ಸಹಕಾರ ನೀಡಿದ ಕ್ಷೇತ್ರದ ಹಾಲಿ ಹಾಗೂ ಮಾಜಿ ಶಾಸಕರು, ಸಂಘ ಸಂಸ್ಥೆಗಳವರು, ವಿಶೇಷವಾಗಿ ಪೋಷಕರ ಸಹಕಾರಕ್ಕೆ ಧನ್ಯವಾದ




ಹೇಳಿದರು. ಗ್ರೂಪ್, ಸೋಲೋ ಹೀಗೆ ಹಲವು ವಿಭಾಗಗಳಲ್ಲಿ ನಡೆದ ಸ್ಪರ್ಧೆಯಲ್ಲಿ ಒಟ್ಟು 11 ಮಕ್ಕಳು ಭಾಗಿಯಾಗಿದ್ದರು. ಹಾಗೆಯೇ ಕರ್ನಾಟಕದ ಸುಮಾರು 17 ಜಿಲ್ಲೆಗಳ ಸ್ಪರ್ಧಾಳುಗಳು ಭಾಗಿಯಾಗಿದ್ದರು. ಈ ಎಲ್ಲರನ್ನೂ ಮೀರಿಸಿ ಕರ್ನಾಟಕದ, ಹಾಸನ ಜಿಲ್ಲೆಯ ಮಕ್ಕಳು ಒಳ್ಳೆಯ ಸಾಧನೆ ಮಾಡಿದ್ದಾರೆ ಎಂದು ಸಂತಸ ವ್ಯಕ್ತಪಡಿಸಿದರು. ಹಿಂದೆ ತಮಿಳುನಾಡು ಮೊದಲಾದ ಕಡೆಗಳಲ್ಲಿ ನಡೆದ ಸ್ಪರ್ಧೆಯಲ್ಲೂ ನಮ್ಮ ಮಕ್ಕಳು ಬಹುಮಾನ ತಂದಿದ್ದಾರೆ. ಆದರೆ ಅಂತಾರಾಷ್ಟ್ರೀಯ ಸ್ಪರ್ಧೆಯಲ್ಲಿ ಹಾಸನಕ್ಕೆ ಇಷ್ಟೊಂದು ಬಹುಮಾನ ಬಂದಿರುವುದು ಇದೇ ಮೊದಲು ಎಂದು ಹೇಳಿದರು.

ಇದಕ್ಕಾಗಿ 2 ವರ್ಷದಿಂದ 30 ವರ್ಷದ ಯುವಕ-ಯುವತಿಯರಿಗೆ ತರಬೇತಿ ನೀಡಿ ಅಣಿಗೊಳಿಸಲಾಗಿದೆ ಎಂದು ವಿವರಿಸಿದರು. ಸ್ಪರ್ಧೆಮಾಡಿದ್ದು ತುಂಬಾ ಖುಷಿ ಆಯ್ತು, ಅಲ್ಲಿಯ ಜನರೂ ಎಲ್ಲ ರೀತಿಯ ಸಹಕಾರ ನೀಡಿದರು

ಸೌಂದರ್ಯ ಎಬುವರು ಮಾತನಾಡಿ, ಮಕ್ಕಳ ದೊಡ್ಡ ಸಾಧನೆ ಸಂತಸ ತಂದಿದೆ. ಹಿಂದೆ ಜಿಲ್ಲಾ ಮಟ್ಟ, ರಾಜ್ಯ, ರಾಷ್ಟ್ರೀಯ ಅಂತಾರಾಷ್ಟ್ರೀಯ ಸ್ಪರ್ಧೆ ನಡೀತು. ಇದಕ್ಕೆ ಎಲ್ಲರೂ ಸಹಕಾರ ನೀಡಿದರು. ಪೋಷಕರು ಚಾಲೆಂಜ್ ಆಗಿ ತೆಗೆದುಕೊಂಡರು, ಎಲ್ಲರ ಸಾಧನೆ ಶ್ರಮದಿಂದ ಸಾಧನೆ ಮಾಡಿರುವುದು ಹೆಮ್ಮೆಯ ವಿಷಯ, ಪೋಷಕರು ಹಣಕಾಸು ಸಮಸ್ಯೆ ಇದ್ದರೂ ಸಹಕಾರ ನೀಡಿದರು. ಇನ್ನು ಮಕ್ಕಳ ಸಾಧನೆಗೆ ಪೋಷಕರು ಅತೀವ ಸಂತಸ ವ್ಯಕ್ತಪಡಿಸಿದರು.

# ಆತ್ಮಹತ್ಯೆಗೆಂದು ನದಿಗೆ ಹಾರಿ ಮರಳಲ್ಲಿ ಸಿಲುಕಿದ!




**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಸಕಲೇಶಪುರ: ಜೀವನದಲ್ಲಿ ಜಿಗುಪ್ಸೆಗೊಂಡ ವ್ಯಕ್ತಿಯೊಬ್ಬ ಪಟ್ಟಣ ಸಮೀಪದ ಹೇಮಾವತಿ ನದಿಗೆ ಹಾರಿ ಆತಹತ್ಯೆಗೆ ಯತ್ನಿಸಿದ್ದಾನೆ. ಆದರೆ ಆತನ ಹಣೇಬರಹ ಚೆನ್ನಾಗಿದ್ದ ಕಾರಣಕ್ಕೆ ಬದುಕುಳಿದಿದ್ದಾನೆ.

ನೀರು ಕಡಿಮೆ ಇದ್ದ ಕಾರಣ ಮರಳಿನಲ್ಲಿ ಸಿಲುಕಿ ಸಾವಿನ ದವಡೆಯಿಂದ ಪಾರಾಗಿದ್ದಾನೆ.

ಹಾಸನ ಮೂಲದ ಚಿರಂತ್ (38) ಎಂಬ ಯುವಕ ಆತ್ಮಹತ್ಯೆಗೆ ಯತ್ನಿಸಿದ್ದ. ಪಟ್ಟಣ ಹೊರ ವಲಯದ ಮಳಲಿ ಬೈಪಾಸ್‌ನಲ್ಲಿರುವ ರಾಷ್ಟ್ರೀಯ ಹೆದ್ದಾರಿ 75ರ ಬಿಎಂ ರಸ್ತೆಯ ಹೇಮಾವತಿ ಸೇತುವೆ ಮೇಲಿಂದ ನದಿಗೆ ಜಿಗಿದ.

ಚಿರಂತ್ ನದಿಗೆ ಜಿಗಿದ ದೃಶ್ಯವನ್ನು ಕಂಡ ಸ್ಥಳೀಯರು, ಪೊಲೀಸರು ಹಾಗೂ ಅಗ್ನಿಶಾಮಕದಳದ ಸಿಬ್ಬಂದಿಗೆ ಮಾಹಿತಿ ನೀಡಿದರು. ಕೂಡಲೇ ಸ್ಥಳಕ್ಕೆ ಆಗಮಿಸಿದ ಅಗ್ನಿಶಾಮಕದಳ ಹಾಗೂ ಪೊಲೀಸರ ಸಮಯೋಚಿತ ಕಾರ್ಯಾಚರಣೆಯಿಂದ ಚಿರಂತ್‌ನ್ನು ರಕ್ಷಣೆ ಮಾಡಲಾಗಿದೆ. ವ್ಯಕ್ತಿಯ ಆತಹತ್ಯೆಗೆ ಕಾರಣ ತಿಳಿದು ಬಂದಿಲ್ಲ.ಈ ಸಂಬಂಧ ನಗರಠಾಣೆ ಪೊಲೀಸರು ವಿಚಾರಣೆಗೆ ಒಳಪಡಿಸಿದ್ದಾರೆ.

# ಹೃದಯಾಘಾತ ಲಾರಿ ಚಾಲಕ ಸಾವು

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಸಕಲೇಶಪುರ: ಟೀ ಕುಡಿಯಲು ಬಂದಿದ್ದ ಲಾರಿ ಚಾಲಕನೊಬ್ಬ ನೋಡ ನೋಡುತ್ತಲೇ ಕುಸಿದು ಬಿದ್ದು ಸಾವನ್ನಪ್ಪಿದ ದಾರುಣ ಘಟನೆ ನಡೆದಿದೆ.

ಹೃದಯಾಘಾತದಿಂದ ಲಾರಿ ಚಾಲಕ ಹಠಾತ್ ಸಾವನ್ನಪ್ಪಿದ್ದು, ಮೃತರನ್ನು ಉತ್ತರ ಪ್ರದೇಶ ಮೂಲದ ಅಮರ್ ಸಿಂಗ್ (55) ಎಂದು ಗುರುತಿಸಲಾಗಿದೆ.

ಚಾಲಕನಿಗೆ ಹೃದಯಾಘಾತವಾಗುವ ದೃಶ್ಯ ಸಿಸಿ ಕ್ಯಾಮೆರಾದಲ್ಲಿ ಸೆರೆಯಾಗಿದೆ. ತಾಲೂಕಿನ ಬಾಳ್ಳುಪೇಟೆಯಲ್ಲಿ ಈ ಘಟನೆ ನಡೆದಿದೆ.

ಟೀ ಕುಡಿಯಲು ಕ್ಯಾಂಟಿನ್ ಬಳಿ ಬಂದ ಲಾರಿ ಚಾಲಕ ರಸ್ತೆ ಬದಿ ನಿಲ್ಲಿಸಿದ.

ನಂತರ ಸಮೀಪ ಬಂದು ಟೀ ಕುಡಿದು ಕ್ಷಣಾರ್ಧದಲ್ಲೇ ಹೃದಯಾಘಾತದಿಂದ ಸಾವನ್ನಪ್ಪಿದರು. ಟೀ ಕುಡಿದ ನಂತರ ಕ್ಯಾಂಟೀನ್ ಮುಂದೆಯೇ ನಿಂತಿದ್ದ ಅಮರ್ ಸಿಂಗ್ ನೋಡ ನೋಡುತ್ತಿದ್ದಂತೆಯೇ ಇಲ್ಲವಾದರು. ಈ ಸಂಬಂಧ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ

# ಇತಿಹಾಸದಲ್ಲಿ ಈ ದಿನ

## ಜುಲೈ-05

1776: ಅಮೆರಿಕದ ಕಾಂಗ್ರೆಸ್ ಸ್ವಾತಂತ್ರ್ಯ ಘೋಷಣೆ ಮತ್ತು ಗ್ರೇಟ್ ಬ್ರಿಟನ್‌ನಿಂದ ಸ್ವಾತಂತ್ರ್ಯ ಘೋಷಿಸಿತು.

1785 ರಲ್ಲಿ, ಭೂವಿಜ್ಞಾನಿ ಜೇಮ್ಸ್ ಹಟ್ಟನ್ ಅವರು ಎಡಿನ್‌ಬರ್ಗ್‌ನ ರಾಯಲ್ ಸೊಸೈಟಿಯ ಸಭೆಯಲ್ಲಿ ಮೊದಲ ಬಾರಿಗೆ ತಮ್ಮ ಏಕರೂಪತಾವಾದದ ಸಿದ್ಧಾಂತದ ಸಾರಾಂಶವನ್ನು ಸಾರ್ವಜನಿಕವಾಗಿ ಓದಿದರು.

1803: ಅಧ್ಯಕ್ಷ ಥಾಮಸ್ ಜೆಫರ್ಸನ್ ಲೂಸಿಯಾನ ಖರೀದಿಯನ್ನು ಅಮೆರಿಕಾದ ಜನರಿಗೆ ಘೋಷಿಸಿದರು.

1838 ರ ಹಸ್ಕರ್ ಪಿಟ್ ದುರಂತ: ಇಂಗ್ಲೆಂಡ್‌ನ ಸಿಲ್ಕ್‌ಸ್ಟೋನ್ ಕೊಲಿಯರಿಯಲ್ಲಿ ಪ್ರವಾಹದಿಂದ ತಪ್ಪಿಸಿಕೊಳ್ಳಲು ಪ್ರಯತ್ನಿಸುತ್ತಿದ್ದ 26 ಮಕ್ಕಳು ಮುಳುಗಿ ಸಾವನ್ನಪ್ಪಿದರು. ಇದು 1842 ರ ಗಣಿ ಕಾಯ್ದೆಗೆ ಕಾರಣವಾಯಿತು, ಇದು ಮಹಿಳೆಯರು ಮತ್ತು ಮಕ್ಕಳು ನೆಲದಡಿಯಲ್ಲಿ ಕೆಲಸ ಮಾಡುವುದನ್ನು ನಿಷೇಧಿಸುತ್ತದೆ.

1934: ಪರಮಾಣು ಬಾಂಬ್‌ನ ಸರಪಳಿ-ಪ್ರತಿಕ್ರಿಯೆ ವಿನ್ಯಾಸಕ್ಕೆ ಹಂಗೇರಿಯನ್ ಭೌತಶಾಸ್ತ್ರಜ್ಞ ಲಿಯೋ ಸ್ಜಿಲಾರ್ಡ್ ಪೇಟೆಂಟ್ ಪಡೆದರು.

2017: ಉತ್ತರ ಕೊರಿಯಾ ತನ್ನ ಮೊದಲ ಯಶಸ್ವಿ ಖಂಡಾಂತರ ಕ್ಷಿಪಣಿಯನ್ನು ಜಪಾನ್ ಸಮುದ್ರಕ್ಕೆ ಪರೀಕ್ಷಿಸಿತು.

2025 ರಲ್ಲಿ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ತಮ್ಮ 'ಒಂದು ದೊಡ್ಡ ಸುಂದರ ಮಸೂದೆ'ಗೆ ಕಾನೂನಾಗಿ ಸಹಿ ಹಾಕಿದರು, ಇದನ್ನು ಸೆನೆಟ್ 51-50 ಮತಗಳಿಂದ ಮತ್ತು ಪ್ರತಿನಿಧಿಗಳ ಸಭೆ 218-214 ಮತಗಳಿಂದ ಅಂಗೀಕರಿಸಿತು; ಐದು ರಿಪಬ್ಲಿಕನ್ನರು ಎಲ್ಲಾ ಡೆಮೋಕ್ರಾಟ್‌ಗಳನ್ನು ವಿರೋಧವಾಗಿ ಸೇರಿಕೊಂಡರು

# ಹೆದ್ದಾರಿಯೆಂಬ ಹೆಬ್ಬಾವು- 2

**ಧನಂಜಯ ಜೀವಾಳ ಬಿ.ಕೆ.**

**ಗ್ರಾಮಾಯಣ-10**

ಇಡೀ ಪಟ್ಟಣದಲ್ಲಿ ಗಂವ್ವೆನಿಸುವ ನೀರವತೆ. ರಾಷ್ಟ್ರೀಯ ಹೆದ್ದಾರಿ ಹಾದು ಹೋಗಿದ್ದರೂ ಯಾವುದೇ ವಾಹನ ಸಂಚಾರದ ಸುಳಿವಿರಲಿಲ್ಲ. ಹೋಟೆಲ್‌ನ ಮೆಟ್ಟಲಲ್ಲಿ ಚಳಿಗೆ ಮುದುರಿ ಮಲಗಿದ್ದ ನಾಯಿಯೊಂದು ನನ್ನ ಹೆಜ್ಜೆಯ ಸಪ್ಪಳಕ್ಕೆ ಮಿಡುಕಿ ಬಿದ್ದು ಎಚ್ಚರಾಗಿ ತಲೆಯೆತ್ತಿ ನೋಡಿ ನಿಧಾನವಾಗಿ ಗುರುಗುಟ್ಟಿ ಹಾಗೇ ನಿಂತಲ್ಲಿಯೇ ಎರಡು ಸುತ್ತು ತಿರುಗಿ, ಮತ್ತದೇ ಭಂಗಿಯಲ್ಲಿ ನಿದಿರಾದೇವಿಗೆ ಶರಣಾಯಿತು. ನಿರ್ಜನ ರಸ್ತೆ, ನೀರವ ವಾತಾವರಣ. ಹಾದಿಬದಿಯ ಟ್ಯೂಬ್‌ಲೈಟ್ ಬೆಳಕಿನಲ್ಲಿ ಮಂಜು ರಾಶಿ ರಾಶಿ ಬೀಳುತ್ತಿರುವುದು ಕಾಣಿಸಿತು. ಲೈಟ್‌ನ ಸುತ್ತ ಬೃಹದಾಕಾರದ ಬಲೂನನ್ನು ಹಾಗೇ ಅಂತರಾಳದಲ್ಲಿ ಯಾರೋ ಸೃಷ್ಟಿಸಿದ್ದಾರೇನೋ ಅನ್ನಿಸುವಂತೆ ಹಾದಿಯುದ್ದಕ್ಕೂ ಇದ್ದ ಕರೆಂಟಿನ ಕಂಬಗಳಲ್ಲಿ ಮಂಜು ಮುತ್ತಿಕೊಂಡಂತೆ ಭಾಸವಾಗುತ್ತಿತ್ತು. ಮನುಷ್ಯ ಪ್ರಾಣಿಯದೊಂದೂ ಸುಳಿವಿರಲಿಲ್ಲ. ಅಲ್ಲಲ್ಲಿ ಜೀರುಂಡೆಗಳು ತಮ್ಮ ರೆಕ್ಕೆಯುಜ್ಜಿ ಜಿರ್ರ್ ಜಿರ್ರ್ ಎಂದು ಸದ್ದು ಮಾಡುತ್ತಿದ್ದವು. ರಸ್ತೆ ಬದಿಯ ಚರಂಡಿಗಳಲ್ಲಿ ಹಂದಿಮರಿ ಗಾತ್ರದ ಹೆಗ್ಗಣಗಳು ಗುಡುಗುಡು ಗದ್ದಲ ಮಾಡುತ್ತಾ, ಒಂದನ್ನೊಂದು ಅಟ್ಟಿಸಿಕೊಂಡು ಗೊರಗೊರ ಸದ್ದು ಮಾಡುತ್ತಿದ್ದವು. ಅಂಗಡಿಯವರು ಕಸವನ್ನೆಲ್ಲಾ ರಾತ್ರಿ ಗುಡ್ಡೆಹಾಕಿ ಬೆಂಕಿಕೊಟ್ಟ ಪೇಪರ್, ರಟ್ಟಿನ ಬೂದಿ ಬೀಸಲೋ ಬೇಡವೋ ಎಂಬಂತೆ ಮಿಸುಕಾಡುತಿದ್ದ ಗಾಳಿಗೆ ನಿಧಾನವಾಗಿ ಹರಡುತ್ತಾ ಚೆದುರಿಹೋಗುತಿತ್ತು. ಯಾವುದೋ ಲಾರಿಯ ಚಕ್ರಕ್ಕೆ ಸಿಕ್ಕು ಎದೆಯಿಂದ ಬಾಲದವರೆಗೆ ಚಟ್ನಿಯಾಗಿದ್ದ ಬೆಕ್ಕೊಂದು ರಸ್ತೆಯ ಮೇಲೆ ಅನಾಥ ಶವವಾಗಿತ್ತು. ರಸ್ತೆ ಬದಿ ಎಳನೀರು, ಹಣ್ಣು ಮಾರುವ ಅಂಗಡಿಯವರು ಹಿಂದಿನ ದಿನದ ವ್ಯಾಪಾರ ಮುಗಿಸಿ ತಮ್ಮ ಅಂಗಡಿಯನ್ನೂ ಎತ್ತಿಡದೇ, ಹಾಗೇ ಅದಕ್ಕೆ ಟಾರ್ಪಾಲಿನ್ ಅನ್ನು ಹೊದೆಸಿ ಮುಚ್ಚಿಗೆ ಹಾಕಿದ್ದರು. ಹಣ್ಣಿನ ಜೊತೆಯೇ ಹಣ್ಣಾಗಿ ಮಲಗಿದ್ದವನೊಬ್ಬ ಕೆಮ್ಮಿ, ಮಗ್ಗುಲು ಹೊರಳಿಸಿ ಮಲಗಿದಾಗ ನಾನು ಬೆಚ್ಚಿಬಿದ್ದೆ. ಯಾವುದೋ ವಸ್ತುವಿನ ರಾಶಿಯೆಂದುಕೊಂಡು ದಾಟಿ ಮುಂದೆ ಹೋಗುತ್ತಿದ್ದ ನನಗೆ ಆ ರಾಶಿಯಿಂದ ಕೆಮ್ಮಿದ ಸದ್ದು ಕೇಳಿ ಬೆಚ್ಚಿದಂತೆ ಗಕ್ಕೆನಿಸಿತು.

ರೂಂ ಚೆಕ್‌ಔಟ್ ಮಾಡಿ ಬಸ್‌ಸ್ಟಾಂಡಿಗೆ ಬಂದಾಗ ಆ ರಾತ್ರಿಯ ನೀರವತೆ, ನಿರ್ಜನ ವಾತಾವರಣ ಕಂಡು ದಿಗಿಲಾದರೂ ಟ್ರಕ್ಕಿಂಗ್‌ನ ರೋಚಕತೆಯನ್ನು ಕಲ್ಪಿಸಿಕೊಳ್ಳುತ್ತಾ ಉತ್ತೇಜನಗೊಳ್ಳುತ್ತಿದ್ದೆ. ನಿರ್ಜನವಾಗಿದ್ದ ಬಸ್‌ಸ್ಟಾಂಡ್‌ನಲ್ಲಿ ಬಂದು ನಿಂತ ನನಗೆ ರಾಷ್ಟ್ರೀಯ ಹೆದ್ದಾರಿಯ ಎಡಬಲಗಳೆರಡೂ ನೇರವಾಗಿ ಸುಮಾರು ಅರ್ಧ ಕಿಲೋಮೀಟರ್‌ವರೆಗೆ ಕಾಣುತಿತ್ತು. ವಿದ್ಯುತ್ ಕಂಬದ ಮೇಲಿನ ಮಂಜು ಮೆತ್ತಿಕೊಂಡ ಟ್ಯೂಬ್‌ಲೈಟ್‌ಗಳು ದೂರ ದೂರವಾದಂತೆ ಹತ್ತಿ ಹಿಂಜಿದಂತೆ ತೋರುತಿದ್ದವು. ಹದಿನೈದಿಪ್ಪತ್ತು ನಿಮಿಷಗಳಿಗೊಮ್ಮೆ ಭಾರೀ ಲೋಡ್ ಹೊತ್ತಿದ್ದ ಲಾರಿಗಳು, ಆಯಿಲ್ ಟ್ಯಾಂಕರ್‌ಗಳು ಆ ರಾಷ್ಟ್ರೀಯ ಹೆದ್ದಾರಿಯಲ್ಲಿ ಬರುತ್ತಿದ್ದವು. ಸುಮಾರು ನಾಲ್ಕೈದು ವಾಹನಗಳಿಗೆ ಡ್ರಾಪ್‌ಗಾಗಿ ಕೈತೋರಿಸಿ ಮುಖಭಂಗ ಮಾಡಿಸಿಕೊಂಡಿದ್ದೆ. ಡ್ರೈವರ್‌ಗಳೊಮ್ಮೊಮ್ಮೆ ಈ ಅಪರಾತ್ರಿಯಲ್ಲಿ ವಾಹನ ನಿಲ್ಲಿಸಲು ಕೈಅಡ್ಡ ಚಾಚಿದ ನನ್ನನ್ನು ನಿರ್ಲಕ್ಷದಿಂದ ಮತ್ತು ಅನುಮಾನದಿಂದ ನೋಡಿ, ತಾವು ಬರುತ್ತಿದ್ದ ವೇಗದಲ್ಲೇ ಸುಂಯ್ ಎಂದು ಚಲಿಸಿ ಅಂತರ್ಧಾನಾಗುತ್ತಿದ್ದರು.

ಎಡಬಾಗಕ್ಕೆ ಸ್ವಲ್ಪವೇ ದೂರದಲ್ಲಿ ಎರಡೇ ದೀಪಗಳು ಕಾಣುತಿದ್ದು ಉಳಿದಂತೆ ಪೂರಾ ಕತ್ತಲೆಯ ಕೂಪವಾಗಿದ್ದ ಬಸ್‌ಸ್ಟಾಂಡ್‌ನ ರಸ್ತೆ ಬದಿಯ ಚರಂಡಿ ಮೇಲಿನ ಕಲ್ಲುಚಪ್ಪಡಿಯ ಮೇಲೆ ನಿಂತು, ಭಾರವಾದ ಬ್ಯಾಗನ್ನು ಬೆನ್ನಿಗೆ ನೇತು ಹಾಕಿಕೊಂಡು ಮಾರನಹಳ್ಳಿಗೆ ಹೋಗಲು ಏನಾದರೂ ಸಿಕ್ಕೀತೆಂದು ಕಾಯಲಾರಂಭಿಸಿದೆ. ಸುಮಾರು ಮುಕ್ಕಾಲು ಗಂಟೆಯ ಕಾಲ ಒಂದೇ ಒಂದು ವಾಹನದ ಸದ್ದಿಲ್ಲ. ರಾಷ್ಟ್ರೀಯ ಹೆದ್ದಾರಿಯಾದ್ದರಿಂದ ನಿರಂತರ ವಾಹನ ಸಂಚಾರವಿರುತ್ತೆ ಯಾವುದರಲ್ಲಿಯಾದರೂ ಹೋಗೋಣ ಎಂದುಕೊಂಡಿದ್ದವನಿಗೆ ಪಿಚ್ಚೆನ್ನಿಸಿತು. ನಿಂತಿದ್ದ ಚಪ್ಪಡಿಯಡಿಯೇ ಹೆಗ್ಗಣಗಳು ದುಡದುಡನೇ ಓಡಾಡುತ್ತಿದ್ದವು. ಯಾಕೋ ಕೈಗೆ ಕಟ್ಟಿದ್ದ ವಾಚಿನೆಡೆಗೆ ನೋಡ್ತೀನಿ ಅದು ಬೆಳಗಿನ ನಾಲ್ಕೂ ಮೂವತ್ತು ತೋರಿಸುತಿತ್ತು. ಥೋ! ಎಂಥಾ ಕೆಲಸ ಮಾಡಿದೆ. ಹೊರಡುವ ಆತಂಕದಲ್ಲಿ ನಿದ್ದೆ ಬಾರದೇ ಇಷ್ಟು ಬೇಗ ಅನವಶ್ಯಕವಾಗಿ ಈ ಅಪರಾತ್ರಿಯಲ್ಲಿ ರಸ್ತೆ ಬದಿ ನಿಲ್ಲುವ ಕೆಲಸ ಮಾಡಿಕೊಂಡೆನಲ್ಲ ಎಂದುಕೊಂಡೆ. ಅಷ್ಟರಲ್ಲಿ ಯಾವುದೋ ವಾಹನ ಆ ಮಂಜಿನಲ್ಲಿ ಎಷ್ಟು ಸಾಧ್ಯವೋ ಅಷ್ಟೇ ಬೆಳಕನ್ನು ಚೆಲ್ಲಿಕೊಂಡು ಏದುಸಿರು ಬಿಡುತ್ತಾ ದೂರದಲ್ಲಿ ಬರುತಿತ್ತು. ಆದದ್ದಾಗಲೀ ಎಂದು ನಿಲ್ಲಿಸಿ ಹತ್ತುವುದೆಂದು ಯೋಚಿಸಿ ಕೈ ಅಡ್ಡ ಹಾಕಿದೆ. ಆ ಬೃಹದಾಕಾರದ ಲಾರಿ ನನ್ನನ್ನು ಯಕಶ್ಚಿತ್ ಹುಳವೆಂದು ಸಹಾ ಗಮನಿಸದೆ ಬಂದ ರಾಜಗಾಂಭೀರ್ಯದಿಂದಲೇ ನನ್ನನ್ನು ದಾಟಿಕೊಂಡು ತಿರುವಿನಲ್ಲಿ ಮರೆಯಾಯ್ತು. ಮತ್ತದೇ ಜೀರುಂಡೆ ಸದ್ದು ಬಹಳ ಹೊತ್ತು. ಮತ್ತೆ ಎರಡು ಹೆಡ್‌ಲೈಟ್‌ಗಳನ್ನು ಬಿಟ್ಟುಕೊಂಡು ಟ್ಯಾಂಕರ್ ಒಂದು ಬಂದು ಬಂದಂತೇ ಕೈಯಡ್ಡ ತೋರಿಸಿದರೂ ಕೇರ್ ಮಾಡದೇ ಹೋಯ್ತು. ಬೆಳಗಿನ ಜಾವವಾದ್ದರಿಂದ ವಾಹನ ಸಂಚಾರ ವಿರಳವಾಗಿತ್ತು. ರಾತ್ರಿಯಿಡೀ ವಾಹನ ಚಾಲನೆ ಮಾಡಿದವರಿಗೆ ಇದು ನಿದ್ರೆಯ ಸಮಯ. ಮತ್ತೆರಡು ಲಾರಿಗಳು ಬಂದವು; ಅವೋ, ಸ್ವಲ್ಪ ದೂರದಲ್ಲಿ ರಸ್ತೆ ಬದಿಯಲ್ಲಿ ನಿದ್ರೆಗಾಗಿ ರೆಸ್ಟ್ ತೆಗೆದುಕೊಳ್ಳಲು ನಿಂತವು.

ಅಷ್ಟರಲ್ಲಿ ಯಾರೋ ಒಬ್ಬ ಏನನ್ನೋ



ಹೊರಲಾರದೇ ಅದನ್ನೇ ಅಡ್ಡಾದಿಡ್ಡಿಯಾಗಿ ಹೊತ್ತುಕೊಂಡು ಬರುವುದು ದೂರದಲ್ಲಿ ನೆರಳಿನಂತೆ ಕಾಣಿಸಿತು. ನನ್ನಂತೆ ಯಾರೋ ಅಬ್ಬೇಪಾರಿಯಿರಬೇಕೆಂದು, ಸರಿ ಈ ನಿರ್ಜನ ಪ್ರದೇಶದಲ್ಲಿ ಜೊತೆಗೆ ನಿಲ್ಲಲಿಕ್ಕಾದರೂ ಒಬ್ಬ ಸಿಕ್ಕಿದನಲ್ಲಾ ಎಂದುಕೊಂಡೆ. ಹತ್ತಿರ ಬರಬರುತ್ತಾ ನೋಡ್ತೇನೆ, ಮಡಚಬಹುದಾದ ಕಬ್ಬಿಣದ ಟೇಬಲ್. ಒಂದು ಸೀಮೆಎಣ್ಣೆಯ ಪಂಪ್ ಸ್ಟೌ, ಮತ್ತಿನ್ನೇನೋ ಚೀಲ, ಒಂದು ಕ್ಯಾನ್ ಹೀಗೆ ಏನೇನೋ ತಂದು ನನ್ನ ಪಕ್ಕದಲ್ಲಿನ ಕರೆಂಟಿನ ಕಂಬದ ಬಳಿ ತಂದಿಳಿಸಿದವನೇ, ಬ್ಯಾಗನ್ನು ಕರೆಂಟ್ ಕಂಬಕ್ಕೆ ಸುತ್ತಿದ ತಂತಿಯೊಂದಕ್ಕೆ ನೇತುಹಾಕಿ ಟೇಬಲ್ ಅನ್ನು ಬಿಡಿಸಿಟ್ಟ. ಜೇಬಿನಿಂದ ಬೀಡಿ ಕಟ್ಟನ್ನು ತೆಗೆದು ಒಂದು ಬೀಡಿ ಬಾಯಿಗಿಟ್ಟುಕೊಂಡು ಕಡ್ಡಿ ಗೀರಿ ಸೇದುತ್ತಾ ಹೊಗೆಬಿಡತೊಡಗಿದ.

ಟೇಬಲ್ ಮೇಲೆ ಸ್ಟೌ ಇಟ್ಟು, ಚೆನ್ನಾಗಿ ಪಂಪ್ ಮಾಡಿ ಸ್ಟೌ ಹೊತ್ತಿಸಿದ. ಬಿಸಿಯೇರುವವರೆಗೆ ಮೊಳದೆತ್ತರಕ್ಕೆ ಉರಿಯತೊಡಗಿದ ಸ್ಟೌ ಅನ್ನು ಹಾಗೇ ಬಿಟ್ಟು, ಕ್ಯಾನ್ ಹಾಗೂ ಒಂದು ಬಕೇಟನ್ನು ಎತ್ತಿಕೊಂಡು ನಿಂತಿದ್ದಲ್ಲಿಂದ ಹಿಂಭಾಗದಲ್ಲಿದ್ದ ಗಲ್ಲಿಯೊಳಗೆ ಮಾಯವಾದ. ಅದೆಂಥ ನೀರೋ? ತುಂಬಿಸಿಕೊಂಡು ಬಂದು ಹಾಲಿನ ಪ್ಯಾಕೆಟ್ ಒಡೆದು ಪಾತ್ರೆಯೊಳಗೆ ಹಾಕಿ ಕಾಯಿಸಲು ಶುರೂ ಮಾಡಿದ. ಚೀಲ ಬಿಚ್ಚಿ ಅದರಿಂದ ಬಿಸ್ಕೆಟ್ ಪ್ಯಾಕ್‌ಗಳೂ, ಬನ್‌ಗಳನ್ನೂ ಟೇಬಲ್ ಮೇಲೆ ಜೋಡಿಸಿ, ಆ ನಿರ್ಜೀವ ಸ್ಥಳಕ್ಕೆ ಆ ದಿನದ ಆರಂಭದ ಮುನ್ನುಡಿ ಬರೆದೇಬಿಟ್ಟ. ಅಷ್ಟರಲ್ಲಿ ಮತ್ತೊಂದು ಲಾರಿ ಬಂದು ಈ ಟೀ ಸ್ಟಾಲಿನ ಬಳಿ ನಿಂತಿತು. ನನಗೆ ಭಾರೀ ಖುಷಿಯಾಯ್ತು. ಇದರಲ್ಲಾದರೂ ಡ್ರಾಪ್ ತಗೋಣವೆಂದುಕೊಂಡೆ. ಡ್ರೈವರ್, ಕ್ಲೀನರ್‌ಗಳಿಬ್ಬರೂ ಇಳಿದು ಬೀಡಿ ಹೊತ್ತಿಸಿ, ಒಂದಷ್ಟು ಹೊತ್ತು ಹೊಗೆ ಬಿಟ್ಟು, ಬನ್ ತಿಂದು, ಟೀ ಕುಡಿದರು. ಟೀ ಕುಡಿಯುತ್ತಿದ್ದವರಿಗೆ ನಾನು ಮಾರನಹಳ್ಳಿಯವರೆಗೆ ಬರುವುದಾಗಿ ತಿಳಿಸಿದೆ. ಅವರು ಕೇಳಿಸಿಕೊಂಡು ಅವರವರಲ್ಲೇ ಏನೋ ಮಾತನಾಡಿಕೊಂಡರು. ಆಗೋದಿಲ್ಲವೆಂದು ಹೇಳಿ ಸೀದಾ ಲಾರಿಯೇರಿ ಹೊರಟರು. ನನಗೂ ಟೀ ಕುಡಿಯುವ ಮನಸ್ಸಾದರೂ ಈ ಮನುಷ್ಯ ಎಂಥಾ ನೀರು ಹಾಕಿದ್ದಾನೋ ಎಂದುಕೊಂಡು ಸುಮ್ಮನಾಗಿ; ಇನ್ನು ನನ್ನ ಕೆಲಸವಾಗಲಿಲ್ಲವೆಂದು ಯಮಭಾರದ ಬ್ಯಾಗನ್ನು ಬೆನ್ನ ಮೇಲೆ ಸರಿಯಾಗಿ ಕೂರಿಸಿಕೊಂಡು ಮುಂದಿನ ವಾಹನಕ್ಕಾಗಿ ಕಾಯ್ತಾ ನಿಂತೆ.

ಆ ರೀತಿಯ ಕತ್ತಲ ಅಪರಿಚಿತ ಸ್ಥಳದಲ್ಲಿ ದಿಕ್ಕುಗಾಣದಂತೆ ಸಿಕ್ಕಸಿಕ್ಕವರನ್ನು ಡ್ರಾಪ್‌ಗಾಗಿ ಕೇಳುವುದರ ಪಾಡನ್ನು ಅನುಭವಿಸಿಯೇ ತಿಳಿಯಬೇಕು. ಒಂದು ಬನ್ ತಗೊಂಡು ತಿನ್ನುತ್ತಾ ಟೀ ಸ್ಟಾಲಿನವನ ಬಳಿ 'ಮಾರನಹಳ್ಳಿಯವರೆಗೆ ಯಾರಾದ್ರೂ ಡ್ರಾಪ್ ಕೊಡ್ತಾರಾ' ಎಂದು ಕೇಳಿದೆ. ''ಇಷ್ಟು ಹೊತ್ತಿಗೆ ಲಾರಿಗಳೂ ಕಡಿಮೆ ಓಡಾಡ್ತಾವೆ, ನೋಡಣ ಇರಿ, ಮತ್ಯಾವುದಾದ್ರೂ ಬಂದ್ರೆ ಕೇಳಿನೋಡಾಣ'' ಎಂದ. ಸ್ವಲ್ಪ ಹೊತ್ತಿನಲ್ಲಿ ಭತ್ತದ ಲೋಡಿನ ಲಾರಿಯೊಂದು ಬಂದು ಚಾಲಕ ಟೀ ಕುಡಿಯಲು ಇಳಿದ. ಟೀ ಸ್ಟಾಲಿನವನು ಅವನೊಡನೆ ನನ್ನ ಬಗ್ಗೆ ಹೇಳಿ ಕರೆದುಕೊಂಡು ಹೋಗಲು ಕೇಳಿಕೊಂಡ. ಲಾರಿಯವ ಅಂಥಾ ಏನೂ ಆಸಕ್ತಿ ತೋರಲಿಲ್ಲ. ಇದೂ ಯಾಕೋ ಡೌಟ್ ಕೇಸೇ ಎಂದುಕೊಂಡು ಸುಮ್ಮನಾದೆ. ಚಾಲಕ, ಕ್ಲೀನರ್ ಇಬ್ಬರೂ ತಮ್ಮ ಲಾರಿಯಲ್ಲಿದ್ದ ಕ್ಯಾನ್‌ನಿಂದ ನೀರು ತೆಗೆದು ಮುಖ ತೊಳೆದುಕೊಂಡು ಲಾರಿಯೇರಿ ಕುಳಿತರು.

ಚಾಲಕ ಕ್ಲೀನರ್ ಬಳಿ ಏನೋ ಮಾತನಾಡಿ, ನನ್ನೆಡೆಗೆ ತಿರುಗಿ ಲಾರಿ ಹತ್ತಲು ಸೂಚಿಸಿದ. ಬದುಕಿದೆಯಾ ಬಡಜೀವವೇ ಎಂದುಕೊಂಡು ತೂಕದ ಬ್ಯಾಗನ್ನು ಕ್ಯಾಬಿನ್ನಿನೊಳಗೆ ಹಾಕಿ ಹತ್ತಿ ಕುಳಿತೆ. ಲಾರಿ ಪ್ರಯಾಣ ಮುಂದುವರೆಸಿತು.

ಕ್ಲೀನರ್ ಬಳಿ ನಾನು ಮಾರನಹಳ್ಳಿ ಬಸ್‌ಸ್ಟಾಪ್‌ನಲ್ಲಿ ಇಳಿಯಬೇಕೆಂದು ತಿಳಿಸಿದೆ. ಅವನು ಡ್ರೈವರ್‌ನ ಬಳಿ ನನಗೆ ಸರಿಯಾಗಿ ತಿಳಿಯದ ಭಾಷೆಯಲ್ಲಿ ಏನೋ ಹೇಳಿದ. ಮಂಜಿನಲ್ಲಿ ಮುಚ್ಚಿಹೋಗಿದ್ದ ಮುಂಜಾವಿನ ನೀರವತೆಯನ್ನು ಸೀಳುತ್ತಾ ಮುಂದೆ ಸಾಗುತ್ತಿದ್ದ ಹೆಡ್‌ಲೈಟ್ ಬೆಳಕಿನಲ್ಲಿ ನಿರಂತರವಾಗಿ ಮೈಚಾಚಿ ಮಲಗಿದ್ದ ರಸ್ತೆಯನ್ನೇ ನೋಡುತ್ತಾ ಮಾರನಹಳ್ಳಿ ಬರುವುದನ್ನೇ ಅಥವಾ ನಾವು ಮಾರನಹಳ್ಳಿಯನ್ನು ತಲುಪುವುದನ್ನೇ ನಿರೀಕ್ಷಿಸುತ್ತಾ ಕುಳಿತೆ ನಾನು.

Printed, Published and Owned by Manjunatha B.R. and Printed at PAPPAS PRINT HOUSE, BEHIND DISTRICT STADIUM, M.G.ROAD,VIDYANAGAR, HASSAN, KARNATAKA-573201 and published at No. 150, BANAVASE, SAKALESHPURA TALLUK, HASSAN DISTRICT, KARNATAKA-573201. Editor: MANJU BANAVASE. Ph: 8762954248